# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 409**

**ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 16-02-2023**

**ಉತ್ತರಿಸುವವರು : ಸನ್ಮಾನ್ಯ ಮುಖ್ಯಮಂತ್ರಿಗಳು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯಲ್ಲಿ ಎಷ್ಟು ಜಾತಿಯ ಪ್ರಾಣಿ/ಪಕ್ಷಿಗಳಿವೆ. ಅವು ಯಾವುವು (ವಿವರ ನೀಡುವುದು. | ಬೀದರ್ ಜಿಲ್ಲೆಯಲ್ಲಿ ವಿವಿಧ ಪ್ರಬೇಧದ ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಗಣತಿ ಕಾರ್ಯವನ್ನು ನಿರ್ವಹಿಸಿರುವುದಿಲ್ಲ. ಆದುದರಿಂದ ನಿಖರವಾಗಿ ವಿವಿಧ ಜಾತಿಯ ಪ್ರಾಣಿ ಪಕ್ಷಿಗಳ ವಿವರವನ್ನು ಒದಗಿಸಲು ಸಾಧ್ಯವಾಗುವುದಿಲ್ಲ.<br>ಆದಾಗ್ಯೂ ಬೀದರ್ ಜಿಲ್ಲೆಯಲ್ಲಿ ಜಿಂಕೆ, ಕಾಡು ಹಂದಿ, ಮೊಲ, ಮಂಗ, ನರಿಗಳು ಹಾಗೂ ಪಕ್ಷಿಗಳಲ್ಲಿ ನವಿಲು, ಕಾಗೆ, ಪಾರಿವಾಳ, ಗಿಳಿ, ನೀಲಕಂಠ ಮತ್ತು ಇತ್ಯಾದಿ ಪಕ್ಷಿಗಳು ಕಂಡು ಬರುತ್ತವೆ. |
| (ಆ) | ಕಳೆದ ಐದು ವರ್ಷಗಳಲ್ಲಿ ಯಾವ ಯಾವ ಜಾತಿಯ ಪ್ರಾಣಿಗಳು/ಪಕ್ಷಿಗಳು ಹೆಚ್ಚಾಗಿವೆ ಅಥವಾ ಕಡಿಮೆಯಾಗಿವೆ: (ವಿವರ ನೀಡುವುದು) | ಕಳೆದ ಐದು ವರ್ಷಗಳಲ್ಲಿ ಯಾವ ಜಾತಿಯ ಪ್ರಾಣಿಗಳು/ಪಕ್ಷಿಗಳು/ ಹೆಚ್ಚು ಅಥವಾ ಕಡಿಮೆಯಾಗಿದೆ ಎಂಬುದರ ಬಗ್ಗೆ ಗಣತಿ ಕಾರ್ಯ ಕೈಗೊಂಡಿರುವುದಿಲ್ಲ. |
| (ಇ) | ಈ ಪ್ರಾಣಿ-ಪಕ್ಷಿಗಳಿಂದ ಎಷ್ಟು ಎಕರೆ ರೈತರ ಬೆಳೆಗೆ ಹಾನಿಯಾಗಿದೆ: ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ? | ವನ್ಯ ಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್ ಡಬ್ಲ್ಯೂ 2016, ಬೆಂಗಳೂರು, ದಿನಾಂಕ: 19.09.2016 ರನ್ವಯ ಕೆಜಿ/ಕ್ವಿಂಟಾಲ್ ಪ್ರಮಾಣದಲ್ಲಿ ಮೌಲ್ಯಮಾಪನ ಮಾಡಿ ನಿಗದಿಪಡಿಸಿದ ಪರಿಹಾರದ ಮೊತ್ತವನ್ನು ಪಾವತಿಸಲಾಗುತ್ತಿದೆ.<br>ಪ್ರಸ್ತುತ ಸದರಿ ಬೆಳೆಗಳ ದರಗಳನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 156 ಎಫ್ ಡಬ್ಲ್ಯೂ ಎಲ್ 2022 ದಿನಾಂಕ: 18.01.2023 ರಲ್ಲಿ ಪರಿಷ್ಕರಿಸಿ ದ್ವಿಗುಣಗೊಳಿಸಲಾಗಿದೆ. (ಪ್ರತಿ ಲಗತ್ತಿಸಿದೆ)<br>ಬೀದರ್ ಜಿಲ್ಲೆಯಲ್ಲಿ ವನ್ಯಪ್ರಾಣಿಗಳಿಂದ ರೈತರ ಬೆಳೆ ಹಾನಿಯಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶಗಳನ್ವಯ ಪಾವತಿಸಲಾದ ನಿಯಮಾನುಸಾರ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ.ಸ | ವರ್ಷ | ಫಲಾನುಭವಿಗಳ ಸಂಖ್ಯೆ | ಪರಿಹಾರ ಧನ ಪಾವತಿಸಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 2018-19 | 200 | 14,80,000.00 |
| 2 | 2019-20 | 204 | 10,00,000.00 |
| 3 | 2020-21 | 237 | 18,50,000.00 |
| 4 | 2021-22 | 286 | 11,999,96.00 |
| 5 | 2022-23 | 292 | 26,97,000.00 |
| | ಒಟ್ಟು | **1219** | **82,26,996.00** |

ಸಂಖ್ಯೆ: ಅಪಜೀ 12 ಎಫ್‌ಡಬ್ಲ್ಯೂಎಲ್ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಾಶ ಪ್ರಕರಣಗಳಿಗೆ ನೀಡಲಾಗುತ್ತಿರುವ ದಯಾತ್ಮಕ ಧನವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:-**

(1) ಸರ್ಕಾರದ ಆದೇಶ ಸಂಖ್ಯೆ:ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ: 30/04/2011.

(2) ಸರ್ಕಾರದ ಆದೇಶ ಸಂಖ್ಯೆ:ಅಪಜೀ 109 ಎಫ್‌ಎಪಿ 2014, ದಿನಾಂಕ:13/08/2014.

(3) ಸರ್ಕಾರದ ಆದೇಶ, ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19/09/2016.

(4) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಪತ್ರ ಸಂಖ್ಯೆ:ಪ್ರಮುಅಸಂ(ವಜೀ)/ಸಿ2/ಸಿಆರ್-37/2011-12, ದಿನಾಂಕ:12/10/2022

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಸರ್ಕಾರದ ಆದೇಶದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಾಶ, ಮಾನವ ಪ್ರಾಣಹಾನಿ, ಸಾಕು ಪ್ರಾಣಿಗಳ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ ಹಾಗೂ ಆಸ್ತಿಪಾಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರ ಮೊತ್ತವನ್ನು ನಿಗಧಿಪಡಿಸಿ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರಗಳನ್ನು ಪ್ರತ್ಯಾಯೋಜಿಸಿ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಸರ್ಕಾರದ ಆದೇಶದಲ್ಲಿ 2014-15ನೇ ಸಾಲಿನಿಂದ ಜಾರಿಗೆ ಬರುವಂತೆ ಮಾನವ-ವನ್ಯಜೀವಿ ಸಂಘರ್ಷದಿಂದಾಗಿ ಹಸು, ಎತ್ತು, ಎಮ್ಮೆ, ಕೋಣಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.10,000/- ಕ್ಕೆ ಹೆಚ್ಚಿಸಲು ಹಾಗೂ ಮೇಕೆ, ಕುರಿಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.5,000/- ಗಳಿಗೆ ಹೆಚ್ಚಿಸಲು ಹಾಗೂ **ಬೆಳೆಹಾನಿ ಉಂಟಾದಲ್ಲಿ ಸಂತ್ರಸ್ತ ರೈತರಿಗೆ ನೀಡಲಾಗುತ್ತಿರುವ ಪರಿಹಾರ ಧನದ ಗರಿಷ್ಠ ಮಿತಿಯನ್ನು ರೂ.50,000/- ರಿಂದ ರೂ.1;00,000/- ಗಳಿಗೆ ಹೆಚ್ಚಿಸಲಾಗಿದೆ.**

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರ ಸರ್ಕಾರದ ಆದೇಶದಲ್ಲಿ ವನ್ಯಪ್ರಾಣಿಗಳಿಂದ ಉಂಟಾದ ಬೆಳೆನಾಶಕ್ಕೆ ದಯಾತ್ಮಕ ದರ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಮತ್ತು ಭಾಗಶಃ ಶಾಶ್ವತ ಅಂಗವಿಕಲತೆ ಹೊಂದುವ ವ್ಯಕ್ತಿಗಳಿಗೆ ಪರಿಹಾರಧನ, ಕಾಡು ಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಠ ಪರಿಹಾರ ಧನ ಹಾಗೂ ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟ ಪ್ರತಿ ಪ್ರಕರಣಕ್ಕೆ ಆದೇಶದಲ್ಲಿ ನಿಗಧಿಪಡಿಸಲಾಗಿರುವ ದಯಾತ್ಮಕ ದರ ಮತ್ತು ಪರಿಹಾರವನ್ನು ಅನುಬಂಧದಲ್ಲಿರುವಂತೆ ಹೆಚ್ಚಿಸಿ ನಿಗಧಿಪಡಿಸಲಾಗಿದೆ.

...2

Hanguley 18/1/23

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರು ಸನ್ಮಾನ್ಯ ಮುಖ್ಯಮಂತ್ರಿಗಳು 2022-23ನೇ ಸಾಲಿನ ಸೆಪ್ಟೆಂಬರ್ ಮಾಹೆಯಲ್ಲಿ ನಡೆದ ಅಧಿವೇಶನದಲ್ಲಿ ದಿನಾಂಕ:21/09/2022 ರಂದು ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಹಾಗೂ ಬೆಳೆ ಹಾನಿ ಪ್ರಕರಣಗಳಲ್ಲಿ ಪ್ರಸ್ತುತ ಪಾವತಿಸಲಾಗುತ್ತಿರುವ ಪರಿಹಾರ ಧನವನ್ನು ದುಪ್ಪಟ್ಟು ಮಾಡುವುದಾಗಿ ಘೋಷಿಸಿರುವುದರಿಂದ ವನ್ಯಪ್ರಾಣಿ ದಾಳಿಯಿಂದ ಉಂಟಾದ ಬೆಳೆನಾಶಕ್ಕೆ ಪ್ರಸ್ತುತ ಪಾವತಿಸುತ್ತಿರುವ ಪರಿಹಾರ ಧನವನ್ನು ಪರಿಷ್ಕರಿಸಿ ದ್ವಿಗುಣಗೊಳಿಸಲು ಹಾಗೂ ಸದರಿ ಪರಿಹಾರ ಮೊತ್ತವನ್ನು ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರಗಳನ್ನು ಪ್ರತ್ಯಾಯೋಜಿಸಿ ಮಂಜೂರಾತಿ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಇ- ಸಂಖ್ಯೆ: ಅಪಜೀ 156 ಎಫ್‌ಡಬ್ಲ್ಯೂಎಲ್ 2022,**
**ಬೆಂಗಳೂರು, ದಿನಾಂಕ:18-01-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಾಶ ಪ್ರಕರಣಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19-09-2016ರನ್ವಯ ಪಾವತಿಸುತ್ತಿರುವ ಪರಿಹಾರ ಮೊತ್ತವನ್ನು ದ್ವಿಗುಣಗೊಳಿಸಿ ಹಾಗೂ ಮಾವು, ಸಪೋಟ, ಸೀಬೆ, ಹಲಸು, ದಾಳಿಂಬೆ ಸೀತಾಫಲ ಮತ್ತು ಹಿಪ್ಪುನೇರಳೆ ಬೆಳೆಗಳನ್ನು ಹೊಸದಾಗಿ ಸೇರ್ಪಡೆಗೊಳಿಸಿ ಪರಿಹಾರ ಮೊತ್ತವನ್ನು ಈ ಆದೇಶದಲ್ಲಿನ **ಅನುಬಂಧ-1** ರಲ್ಲಿರುವಂತೆ ನಿಗದಿಪಡಿಸಲಾಗಿದೆ.

ಈ ಪರಿಹಾರ ಮೊತ್ತವನ್ನು ಪಾವತಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರವನ್ನು **ಅನುಬಂಧ-2** ರಲ್ಲಿರುವಂತೆ ಪ್ರತ್ಯಾಯೋಜಿಸಿ ಮಂಜೂರಾತಿ ನೀಡಲಾಗಿದೆ.

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಗೆ ಬರತಕ್ಕದ್ದು.

ಈ ಪರಿಹಾರ ಮೊತ್ತದ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಹೊರಡಿಸಲಾಗಿದೆ:-

(1) ಮೇಲಿನ ಪ್ರಕರಣಗಳಲ್ಲಿ ಒತ್ತುವರಿಗೊಂಡ ಅರಣ್ಯ ಭೂಮಿಯಲ್ಲಿ ಬೆಳೆಯಲಾದ ಬೆಳೆಗಳು ಕಾಡು ಪ್ರಾಣಿಗಳಿಂದ ಹಾನಿಗೊಂಡಲ್ಲಿ ಅಂಥ ಬೆಳೆ ನಷ್ಟಕ್ಕೆ ಪರಿಹಾರ ಧನ ನೀಡಲಾಗುವುದಿಲ್ಲ.

(2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರು ಎಲ್ಲಾ ಪ್ರಕರಣಗಳಲ್ಲಿ ಪರಿಹಾರ ಧನದ ವಿತರಣೆಯ ಆಡಳಿತವನ್ನು ನಿಭಾಯಿಸುವುದು.

(3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂರಕ್ಷಣಾಧಿಕಾರಿಗಳು. ಪರಿಹಾರ ಮೊತ್ತವು ಗುಚ್ಛವಾಗಿರುವ ಪ್ರಕರಣಗಳಲ್ಲಿ ಪರಿಹಾರ ಧನ ವಿತರಿಸುವ ಸಂದರ್ಭದಲ್ಲಿ ಸಂಬಂಧಿಸಿದ ಕ್ಷೇತ್ರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ / ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಸ್ಥಳ ತಪಾಸಣೆ ಮಾಡಿಸುವುದು.

...3

Kaqaleg 18/1/23

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 696 ವೆಚ್ಚ-5/2022, ದಿನಾಂಕ:12/01/2023ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Manjula 18/1/23
(ಜಿ. ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
18/1/23 (ಅರಣ್ಯ-ಎ)

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 250 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, #432, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇಲ್ಲಿಗೆ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003 ಇಲ್ಲಿಗೆ 500 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.
4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಅರಣ್ಯ ಸಂರಕ್ಷಣಾಧಿಕಾರಿಗಳು / ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ / ವನ್ಯಜೀವಿ) / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಮುಖಾಂತರ)
5. ಮಾನ್ಯ ಮುಖ್ಯಮಂತ್ರಿಯವರ ಅಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಜಂಟಿ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯವರ ಆಪ್ತ ಕಾರ್ಯದರ್ಶಿಗಳು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ:ಅಪಜೀ 156 ಎಫ್‌ಡಬ್ಲ್ಯೂಎಲ್ 2022, ದಿನಾಂಕ:18-01-2023 ಕ್ಕೆ

ಅನುಬಂಧ-1

| ಕ್ರ. ಸಂ. | ಬೆಳೆ | ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19-09-2016ರಂತೆ ನಿಗಧಿಯಾಗಿರುವ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) | ಪ್ರಸ್ತುತ ನಿಗಧಿಪಡಿಸಲಾಗಿರುವ ಪರಿಷ್ಕೃತ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) |
|---|---|---|---|
| 1 | ಭತ್ತ | 1320 | 2640 |
| 2 | ಜೋಳ | 1240 | 2480 |
| 3 | ಮೆಕ್ಕೆಜೋಳ | 1240 | 2480 |
| 4 | ಸಜ್ಜೆ | 1200 | 2400 |
| 5 | ರಾಗಿ | 1200 | 2400 |
| 6 | ತೊಗರಿ | 3100 | 6200 |
| 7 | ಹೆಸರು | 3400 | 6800 |
| 8 | ಉದ್ದು | 3400 | 6800 |
| 9 | ಕಬ್ಬು | 162.36 | 324.72 |
| 10 | ಹತ್ತಿ | 3970 | 7940 |
| 11 | ಶೇಂಗಾ (ನೆಲಗಡಲೆ) | 3100 | 6200 |
| 12 | ಸೂರ್ಯಕಾಂತಿ | 3020 | 6040 |
| 13 | ಸೋಯಾ | 1960 | 3920 |
| 14 | ಎಳ್ಳು | 3160 | 6320 |
| 15 | ಹುಚ್ಚೆಳ್ಳು | 2480 | 4960 |
| 16 | ಕಂಬು | 1200 | 2400 |
| 17 | ಬಟಾಣಿ | 4600 | 9200 |
| 18 | ಹಲಸಂದೆ | 2400 | 4800 |
| 19 | ಅವರೆ | 2242 | 4484 |
| 20 | ಹಾಗಲಕಾಯಿ | 1800 | 3600 |
| 21 | ಬದನೆಕಾಯಿ | 800 | 1600 |
| 22 | ನುಗ್ಗೆಕಾಯಿ | 3200 | 6400 |
| 23 | ಗಡ್ಡೆಕೋಸು | 1000 | 2000 |
| 24 | ಬೆಂಡೆಕಾಯಿ | 1200 | 2400 |

| ಕ್ರ. ಸಂ. | ಬೆಳೆ | ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19-09-2016ರಂತೆ ನಿಗಧಿಯಾಗಿರುವ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) | ಪ್ರಸ್ತುತ ನಿಗಧಿಪಡಿಸಲಾಗಿರುವ ಪರಿಷ್ಕೃತ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) |
|---|---|---|---|
| 25 | ಮೂಲಂಗಿ | 700 | 1400 |
| 26 | ಹೀರೆಕಾಯಿ | 1000 | 2000 |
| 27 | ಪಡವಲಕಾಯಿ | 1000 | 2000 |
| 28 | ತೊಂಡೆಕಾಯಿ | 1200 | 2400 |
| 29 | ಹೂಕೋಸು | 800 | 1600 |
| 30 | ಬೀಟ್‌ರೂಟ್ | 1638 | 3276 |
| 31 | ಈರುಳ್ಳಿ | 1308 | 2616 |
| 32 | ಟೊಮೋಟೋ | 588 | 1176 |
| 33 | ಆಲೂಗಡ್ಡೆ | 2134 | 4268 |
| 34 | ಕ್ಯಾರೆಟ್ | 2228 | 4456 |
| 35 | ಬೀನ್ಸ್ | 2390 | 4780 |
| 36 | ಅರಿಶಿನ | 4200 | 8400 |
| 37 | ಕರಿಬೂಜ (ಕಲ್ಲಂಗಡಿ) | 1400 | 2800 |
| 38 | ಹಸಿಮೆಣಸಿನಕಾಯಿ | 1954 | 3908 |
| 39 | ದಪ್ಪ ಮೆಣಸಿನಕಾಯಿ | 2000 | 4000 |
| 40 | ಶುಂಠಿ | 3870 | 7740 |
| 41 | ನವಣೆ | 2100 | 4200 |
| 42 | ಎಲೆಕೋಸು | 696 | 1392 |
| 43 | ಕೊತ್ತಂಬರಿ | 3560 | 7120 |
| 44 | ಏಲಕ್ಕಿ | 800/- ಕೆ.ಜಿ.ಗೆ | 1600/- ಕೆ.ಜಿ.ಗೆ |
| 45 | ಮೆಣಸು | 180/- ಕೆ.ಜಿ.ಗೆ | 360/- ಕೆ.ಜಿ.ಗೆ |
| 46 | **ಕಿತ್ತಲೆ** | | |
| | (1) 2 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ | 200/- ಒಂದು ಗಿಡಕ್ಕೆ | 400/- ಒಂದು ಗಿಡಕ್ಕೆ |
| | (2) 2 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ | 320/- ಒಂದು ಗಿಡಕ್ಕೆ | 640/- ಒಂದು ಗಿಡಕ್ಕೆ |

| ಕ್ರ. ಸಂ. | ಬೆಳೆ | ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19-09-2016ರಂತೆ ನಿಗಧಿಯಾಗಿರುವ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) | ಪ್ರಸ್ತುತ ನಿಗಧಿಪಡಿಸಲಾಗಿರುವ ಪರಿಷ್ಕೃತ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) |
|---|---|---|---|
| 47 | **ಅಡಿಕೆ /ತೆಂಗು** | | |
| | (1) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ | 400/- ಒಂದು ಮರಕ್ಕೆ | 800/- ಒಂದು ಮರಕ್ಕೆ |
| | (2) ವರ್ಷ 5 ರಿಂದ 9 ವರ್ಷ ವಯಸ್ಸಿನ ಗಿಡಗಳಿಗೆ | 800/- ಒಂದು ಮರಕ್ಕೆ | 1600/- ಒಂದು ಮರಕ್ಕೆ |
| | (3) 10 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ | 2000/- ಒಂದು ಮರಕ್ಕೆ | 4000/- ಒಂದು ಮರಕ್ಕೆ |
| 48 | ಬಾಳೆ | 160/- ಒಂದು ಗಿಡಕ್ಕೆ | 320/- ಒಂದು ಗಿಡಕ್ಕೆ |
| 49 | ಹರಳು | 4604/- ಒಂದು ಕ್ವಿಂಟಾಲ್‌ಗೆ | 9208/- ಒಂದು ಕ್ವಿಂಟಾಲ್‌ಗೆ |
| 50 | ಮೆಂತ್ಯ ಸೊಪ್ಪು | 4/- ಒಂದು ಕಟ್ಟಿಗೆ | 8/- ಒಂದು ಕಟ್ಟಿಗೆ |
| 51 | ನಿಂಬೆ | 10/- ಪ್ರತಿ ಗಿಡಕ್ಕೆ | 20/- ಪ್ರತಿ ಗಿಡಕ್ಕೆ |
| 52 | ಗಜ ನಿಂಬೆ | 24/- ಪ್ರತಿ ಗಿಡಕ್ಕೆ | 48/- ಪ್ರತಿ ಗಿಡಕ್ಕೆ |
| 53 | ಚೆಂಡು ಮಲ್ಲಿಗೆ (ದಪ್ಪದ್ದು) | 200/- ಕೆ.ಜಿ.ಗೆ | 400/- ಕೆ.ಜಿ.ಗೆ |
| 54 | ಕಾಕಡ ಹೂವು | 80/- ಕೆ.ಜಿ.ಗೆ | 160/- ಕೆ.ಜಿ.ಗೆ |
| 55 | ಕನಕಾಂಬರ | 160-240/- ಕೆ.ಜಿ.ಗೆ | 320-480/- ಕೆ.ಜಿ.ಗೆ |
| 56 | ಸೇವಂತಿ | 20-24 ಕೆ.ಜಿ.ಗೆ | 40-48/- ಕೆ.ಜಿ.ಗೆ |
| 57 | ಕಾಫಿ **(ಷರಾ:ದರವನ್ನು ಪರಿಷ್ಕರಿಸಲಾಗಿದೆ)** | 1 ರಿಂದ 4 ವರ್ಷದ ಅರೇಬಿಕಾ ಒಂದು ಗಿಡಕ್ಕೆ ರೂ.600/- ಹಾಗೂ 4 ವರ್ಷ ಮೇಲ್ಪಟ್ಟ ಅರೇಬಿಕಾ ಒಂದು ಗಿಡಕ್ಕೆ ರೂ.1200/- | |
| | | 1 ರಿಂದ 6 ವರ್ಷದ ರೋಬೋಸ್ಟಾ ಒಂದು ಗಿಡಕ್ಕೆ ರೂ.1500/- ಹಾಗೂ 6 ವರ್ಷ ಮೇಲ್ಪಟ್ಟ ರೋಬೋಸ್ಟಾ ಒಂದು ಗಿಡಕ್ಕೆ ರೂ.3000/- | |
| | **ಹೊಸದಾಗಿ ಸೇರ್ಪಡೆಗೊಳಿಸಲಾದ ಬೆಳೆಗಳು** | | |
| 58 | **ಮಾವು** | | |
| | (1) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳು | - | ರೂ.750 |
| | (2) 6 ರಿಂದ 10 ವರ್ಷವರೆಗಿನ ಗಿಡಕ್ಕೆ | - | ರೂ.1200 |
| | (3) 10 ವರ್ಷ ಮೇಲ್ಪಟ್ಟ ಗಿಡಕ್ಕೆ | - | ರೂ. 1800 |

Manjula 18/1/23

| ಕ್ರ. ಸಂ. | ಬೆಳೆ | ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19-09-2016ರಂತೆ ನಿಗಧಿಯಾಗಿರುವ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) | ಪ್ರಸ್ತುತ ನಿಗಧಿಪಡಿಸಲಾಗಿರುವ ಪರಿಷ್ಕೃತ ದರ / ಕ್ವಿಂಟಾಲ್‌ಗೆ (ರೂ.ಗಳಲ್ಲಿ) |
|---|---|---|---|
| 59 | **ಸಪೋಟ** | | |
| | (1) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳು | - | ರೂ. 500 |
| | (2) 5 ವರ್ಷಕ್ಕಿಂತ ಮೇಲ್ಪಟ್ಟ ಗಿಡಕ್ಕೆ | - | ರೂ.800 |
| 60 | **ಸೀಬೆ** | | |
| | (1) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳು | - | ರೂ.350 |
| | (2) 5 ವರ್ಷಕ್ಕಿಂತ ಮೇಲ್ಪಟ್ಟ ಗಿಡಕ್ಕೆ | - | ರೂ.600 |
| 61 | **ಹಲಸು** | | |
| | (1) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳು | - | ರೂ.350 |
| | (2) 5 ವರ್ಷಕ್ಕಿಂತ ಮೇಲ್ಪಟ್ಟ ಗಿಡಕ್ಕೆ. | - | ರೂ.800 |
| 62 | ದಾಳಿಂಬೆ | - | ರೂ.300/- 1 ಗಿಡಕ್ಕೆ |
| 63 | ಸೀತಾಫಲ 2 ರಿಂದ 4 ವರ್ಷ ಮೇಲ್ಪಟ್ಟು | - | ರೂ.250/- 1 ಗಿಡಕ್ಕೆ |
| 64 | ಹಿಪ್ಪುನೇರಳೆ | - | ರೂ.100/- ಪ್ರತಿ ಗುಂಟೆಗೆ |

18/1/23
(ಜಿ. ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಅರಣ್ಯ-ಎ)

ಸರ್ಕಾರದ ಆದೇಶ ಸಂಖ್ಯೆ:ಅಪಜೀ 156 ಎಫ್‌ಡಬ್ಲ್ಯೂಎಲ್ 2022, ದಿನಾಂಕ:18-01-2023 ಕ್ಕೆ

ಅನುಬಂಧ-2

**ಬೆಳೆನಾಶಕ್ಕೆ ಪರಿಹಾರ ವಿತರಿಸಲು ಕ್ಷೇತ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ**

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ | ಮಂಜೂರಾತಿ ಪ್ರಾಧಿಕಾರ | |
|---|---|---|---|---|
| | | | ಹೆಸರು | ಮೊತ್ತ |
| 1 | ವನ್ಯಪ್ರಾಣಿಗಳಿಂದ ಉಂಟಾಗುವ ಬೆಳೆ ಹಾನಿ | (ಅ)ರೂ.15,000/-ಗಳವರೆಗಿನ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯಾತ್ಮಕ ಧನ ಬೆಳೆನಾಶದ ಪೂರ್ಣ ಮೊತ್ತ | ಪ್ರತಿ ವರ್ಷದಲ್ಲಿ ರೂ.2.00 ಲಕ್ಷಗಳ ವರೆಗಿನ ಬೆಳನಾಶಕ್ಕೆ ಪರಿಹಾರ ನಿಗಧಿಪಡಿಸಿ ಮಂಜೂರು ಮಾಡುವ ಅಧಿಕಾರವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ರೂ.2.00 ಲಕ್ಷಗಳಿಗಿಂತ ಹೆಚ್ಚಿನ ಬೆಳನಾಶಕ್ಕೆ ಮೌಲ್ಯಮಾಪನ ಮಾಡಿ ಪರಿಹಾರ ಧನ ನಿಗಧಿಪಡಿಸಿ ಪಾವತಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ / ಅರಣ್ಯ ಸಂರಕ್ಷಣಾಧಿಕಾರಿಗಳಿಗೆ / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದೆ. | ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.15,000/-ಗಳು |
| | | (ಆ) ರೂ.15,000/-ಗಳಿಗೆ ಮೇಲ್ಪಟ್ಟ ಹಾಗೂ ರೂ.70,000/-ಗಳವರೆಗಿನ ಮೊತ್ತದ ಬೆಳನಾಶಕ್ಕೆ ಶೇಕಡ 50 ರಷ್ಟು ಪರಿಹಾರ ಧನ ಕನಿಷ್ಠ ರೂ.15,000/- ಮತ್ತು ಗರಿಷ್ಠ ರೂ.42,500/- | ಪ್ರತಿ ವರ್ಷದಲ್ಲಿ ರೂ.2.00 ಲಕ್ಷಗಳ ವರೆಗಿನ ಬೆಳನಾಶಕ್ಕೆ ಪರಿಹಾರ ನಿಗಧಿಪಡಿಸಿ ಮಂಜೂರು ಮಾಡುವ ಅಧಿಕಾರವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ರೂ.2.00 ಲಕ್ಷಗಳಿಗಿಂತ ಹೆಚ್ಚಿನ ಬೆಳನಾಶಕ್ಕೆ ಮೌಲ್ಯಮಾಪನ ಮಾಡಿ ಪರಿಹಾರ ಧನ ನಿಗಧಿಪಡಿಸಿ ಪಾವತಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ / | ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.42,500/-ಗಳು |

Manjuley 18/1/23

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ | ಮಂಜೂರಾತಿ ಪ್ರಾಧಿಕಾರ | |
|---|---|---|---|---|
| | | | ಹೆಸರು | ಮೊತ್ತ |
| | | | ಅರಣ್ಯ ಸಂರಕ್ಷಣಾಧಿಕಾರಿಗಳಿಗೆ / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದೆ. | |
| | | (ಇ) ರೂ. 70,000/-ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡ 30 ರಷ್ಟು ಪರಿಹಾರ ಧನ ಕನಿಷ್ಠ ರೂ.42,500/- ಮತ್ತು ಗರಿಷ್ಠ ರೂ.2,00,000/- | ಕ್ಷೇತ್ರ ವ್ಯಾಪ್ತಿಯ ಅರಣ್ಯ ಸಂರಕ್ಷಣಾಧಿಕಾರಿ / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.42,500/- ಮತ್ತು ಗರಿಷ್ಠ ಮೊತ್ತ ರೂ.2,00,000/-ಗಳು |

Manjula 18/1/23
(ಜಿ. ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಅರಣ್ಯ-ಎ)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆನಾಶ, ಮಾನವನ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಸಾಕುಪ್ರಾಣಿಗಳ ಪ್ರಾಣಹಾನಿ, ಆಸ್ತಿಪಾಸ್ತಿ ಹಾನಿ ಹಾಗೂ ಗಾಯಗೊಂಡವರಿಗೆ ನೀಡಲಾಗುತ್ತಿರುವ ಪರಿಹಾರದ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

*******

**ಓದಲಾಗಿದೆ:**

1) ಸರ್ಕಾರದ ಆದೇಶದ ಸಂಖ್ಯೆ: ಅಪಜೀ 52 ಎಫ್‌ಡಬ್ಲ್ಯುಎಲ್ 96, ದಿನಾಂಕ: 13-02-2002.
2) ಸರ್ಕಾರದ ಆದೇಶದ ಸಂಖ್ಯೆ: ಅಪಜೀ 259 ಎಫ್‌ಡಬ್ಲ್ಯುಎಲ್ 2006, ದಿನಾಂಕ: 17-01-2007.
3) ಸರ್ಕಾರದ ಪತ್ರ ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008, ದಿನಾಂಕ: 05.06.2009.
4) ಸರ್ಕಾರದ ಆದೇಶದ ಸಂಖ್ಯೆ: ಅಪಜೀ 70 ಎಫ್‌ಡಬ್ಲ್ಯುಎಲ್ 2009, ದಿನಾಂಕ: 10-08-2010.
5) ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010, ದಿನಾಂಕ: 30/04/2011
6) ಸರ್ಕಾರದ ಆದೇಶ ಸಂಖ್ಯೆ: ಅಪಜೀ 109 ಎಫ್‌ಎಪಿ 2014, ದಿನಾಂಕ: 13.08.2014.
7) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ), ಬೆಂಗಳೂರು ಇವರ ಪತ್ರ ಸಂಖ್ಯೆ: ಪ್ರಮುಅಸಂ(ವಜೀ)/ಸಿ2/ಸಿಆರ್-37/2011-12, ದಿನಾಂಕ: 29.06.2016.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಿಂದ (6)ರ ವರೆಗಿನ ಸರ್ಕಾರದ ಆದೇಶಗಳಲ್ಲಿ ವನ್ಯಪ್ರಾಣಿಗಳಿಂದ ಬೆಳೆ ನಾಶ, ಮಾನವ ಪ್ರಾಣ ಹಾನಿ, ಸಾಕು ಪ್ರಾಣಿಗಳ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಗಾಯಗೊಂಡ ಹಾಗೂ ಆಸ್ತಿಪಾಸ್ತಿ ನಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸುತ್ತಿರುವ ದಯಾತ್ಮಕ ಧನವನ್ನು ಕಾಲಕಾಲಕ್ಕೆ ಪರಿಷ್ಕರಿಸಿ ನಿಗದಿಪಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಪತ್ರ ದಿನಾಂಕ:05.06.2009ರಲ್ಲಿ ವನ್ಯಪ್ರಾಣಿಗಳಿಂದ ಉಂಟಾದ ಬೆಳೆ ನಾಶಕ್ಕೆ ಸಂಬಂಧಿಸಿದಂತೆ, 57 ಬೆಳೆಗಳಿಗೆ ಪ್ರತಿ ಬೆಳೆಗೆ ಸಂಬಂಧಿಸಿದಂತೆ ಪಾವತಿಸಲಾದ ದಯಾತ್ಮಕ ದರವನ್ನು ಪರಿಷ್ಕರಿಸಿ, ನಿಗದಿಪಡಿಸಲಾಗಿದೆ. 2009ರಲ್ಲಿ ವನ್ಯಪ್ರಾಣಿಗಳಿಂದ ಉಂಟಾದ ಬೆಳೆ ನಾಶಕ್ಕೆ ದಯಾತ್ಮಕ ದರವನ್ನು ನಿಗದಿಪಡಿಸಲಾಗಿದ್ದು, ಇದುವರೆವಿಗೂ ಅದರ ಪರಿಷ್ಕರಣೆಯಾಗಿರುವುದಿಲ್ಲ. ಬೆಲೆ ಪರಿಷ್ಕರಣೆಯಾಗಿ ಈಗಾಗಲೇ ಏಳು ವರ್ಷಗಳು ಅವಧಿ ಕಳೆದಿದ್ದು, ಬೆಳೆನಾಶಕ್ಕೆ ಪರಿಹಾರಧನದ ಪರಿಷ್ಕರಣೆಯ ಅಗತ್ಯವಿದೆ. ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ದಿನಾಂಕ:29.06.2016ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರು ಈ ದರಗಳನ್ನು ದ್ವಿಗುಣಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ:30.04.2011ರ ಸರ್ಕಾರಿ ಆದೇಶದಲ್ಲಿ ಶಾಶ್ವತ ಅಂಗವಿಕಲತೆ ಮತ್ತು ಭಾಗಶ: ಅಂಗವಿಕಲತೆಗೆ ಪರಿಹಾರಧನವನ್ನು ನಿಗದಿಪಡಿಸಲಾಗಿದೆ. ವನ್ಯಪ್ರಾಣಿಗಳಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಮತ್ತು ಭಾಗಶ: ಶಾಶ್ವತ ಅಂಗವಿಕಲತೆಗಳಿಗೆ ಸಹ ದಯಾತ್ಮಕ ದರಗಳನ್ನು ಪರಿಷ್ಕರಿಸುವ ಅಗತ್ಯತೆಯಿದೆ. ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಆಮ್ ಆದ್ಮಿ ಭಿಮಾ ಯೋಜನೆಯಲ್ಲಿ ಶಾಶ್ವತ ಅಂಗವಿಕಲತೆಗೆ ನೀಡಲಾಗುತ್ತಿರುವ ವಿಮಾ ಮೊತ್ತದ ಅರ್ಧದಷ್ಟನ್ನು ಭಾಗಶ: ಶಾಶ್ವತ ಅಂಗವಿಕಲತೆಗೆ ನಿಗದಿಪಡಿಸಲಾಗಿದೆ. ಅದೇ ರೀತಿ ವನ್ಯಪ್ರಾಣಿಗಳಿಂದ ಶಾಶ್ವತ ಅಂಗವಿಕಲತೆ ಮತ್ತು ಭಾಗಶ: ಶಾಶ್ವತ ಅಂಗವಿಕಲತೆ ಹೊಂದುವ ವ್ಯಕ್ತಿಗಳಿಗೆ ದಯಾತ್ಮಕ ದರವನ್ನು ಅನುಕ್ರಮವಾಗಿ ರೂ. 5.00 ಲಕ್ಷಗಳು ಮತ್ತು ರೂ.2.50 ಲಕ್ಷಗಳಿಗೆ ಹೆಚ್ಚಿಸಿ ನಿಗದಿಗೊಳಿಸುವ ಬಗ್ಗೆ ಪರಿಶೀಲಿಸಲಾಗಿದೆ.

2..........

ದಿನಾಂಕ:30.04.2011ರಲ್ಲಿ ಕಾಡುಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಠ ಮೊತ್ತ ರೂ.20,000/-ವನ್ನು ಪರಿಹಾರ ಧನವಾಗಿ ನಿಗಧಿಪಡಿಸಲಾಗಿದೆ. ಅದೇ ರೀತಿ ಕಾಡಾನೆಗಳ ದಾಳಿಯಿಂದ ಉಂಟಾದ ಆಸ್ತಿ ನಷ್ಟಕ್ಕೆ ಪ್ರತಿ ಪ್ರಕರಣಕ್ಕೆ ರೂ.7,000/-ಗಳ ಗರಿಷ್ಠ ಮೊತ್ತವನ್ನು ನಿಗಧಿಪಡಿಸಲಾಗಿದೆ. ಈ ಪರಿಹಾರ ಧನವನ್ನು ನಿಗಧಿಪಡಿಸಿ, ಈಗಾಗಲೇ ಐದು ವರ್ಷಕ್ಕಿಂತ ಹೆಚ್ಚು ಅವಧಿಯಾಗಿದ್ದು, ಇದನ್ನು ಸಹ ಹೆಚ್ಚಿಸಿ, ನಿಗಧಿಪಡಿಸುವ ಅಗತ್ಯವಿದೆ.

ಮೇಲ್ಕಂಡ ಹಿನ್ನೆಲೆಯಲ್ಲಿ, ವನ್ಯಪ್ರಾಣಿಗಳಿಂದ ಉಂಟಾಗುವ ಬೆಳೆನಾಶ, ಶಾಶ್ವತ ಅಂಗವಿಕಲತೆ/ಭಾಗಶ: ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ ಮತ್ತು ಕಾಡಾನೆಯಿಂದ ಆಸ್ತಿ ಹಾನಿಗೆ ಸಂಬಂಧಿಸಿದಂತೆ ಪ್ರಸ್ತುತದಲ್ಲಿರುವ ದಯಾತ್ಮಕ ಪರಿಹಾರಧನದ ದರಗಳನ್ನು ಹೆಚ್ಚಿಸುವ, ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯುಎಲ್ 2016</u>**
**<u>ಬೆಂಗಳೂರು, ದಿನಾಂಕ: 19.09.2016</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವನ್ಯಪ್ರಾಣಿಗಳಿಂದ ಉಂಟಾದ ಬೆಳೆಯ ನಾಶಕ್ಕೆ ದಯಾತ್ಮಕ ದರ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಮತ್ತು ಭಾಗಶ: ಶಾಶ್ವತ ಅಂಗವಿಕಲತೆ ಹೊಂದುವ ವ್ಯಕ್ತಿಗಳಿಗೆ ಪರಿಹಾರಧನ, ಕಾಡುಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಠ ಪರಿಹಾರಧನ ಹಾಗೂ ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟ ಪ್ರತಿ ಪ್ರಕರಣಕ್ಕೆ ಈಗ ನಿಗಧಿಪಡಿಸಲಾಗಿರುವ ದಯಾತ್ಮಕ ದರ ಮತ್ತು ಪರಿಹಾರವನ್ನು ಅನುಬಂಧದಲ್ಲಿರುವಂತೆ ತಕ್ಷಣದಿಂದ ಜಾರಿಗೆ ಬರುವಂತೆ ಹೆಚ್ಚಿಸಿ ನಿಗಧಿಪಡಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 793 ವೆಚ್ಚ-5/2016, ದಿನಾಂಕ: 17.09.2016ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

19.09.16
(ಯು.ಹೆಚ್.ನಾರಾಯಣಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು - 560 003 ಇವರಿಗೆ ಹಾಗೂ 250 ಪ್ರತಿಗಳನ್ನು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಒದಗಿಸಲು ಕೋರಿದೆ.

<u>ಪ್ರತಿಗಳು:</u>

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯಪಡೆ ಮುಖ್ಯಸ್ಥರು) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.

4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ)/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಮುಖಾಂತರ).
5. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯೂಎಲ್ 2016
ದಿನಾಂಕ:19.09.2016ಕ್ಕೆ ಅನುಬಂಧ

1. ಕಾಡು ಪ್ರಾಣಿಗಳಿಂದ ಉಂಟಾದ ಬೆಳೆ ನಾಶಕ್ಕೆ ಪರಿಹಾರ ಧನ

| ಕ್ರ. ಸಂ. | ಬೆಳೆ | ಪ್ರಸ್ತುತ ನಿಗಧಿಯಾಗಿರುವ ದರ/ಕ್ವಿಂಟಾಲ್‌ಗೆ (ರೂ.ಗಳಲ್ಲಿ) | ಪರಿಷ್ಕೃತ ದರ/ಕ್ವಿಂಟಾಲ್‌ಗೆ (ರೂ.ಗಳಲ್ಲಿ) |
|---|---|---|---|
| 1. | ಭತ್ತ | 660/- | 1320/- |
| 2. | ಜೋಳ | 620/- | 1240/- |
| 3. | ಮೆಕ್ಕೆ ಜೋಳ | 620/- | 1240/- |
| 4. | ಸಜ್ಜೆ | 600/- | 1200/- |
| 5. | ರಾಗಿ | 600/- | 1200/- |
| 6. | ತೊಗರಿ | 1550/- | 3100/- |
| 7. | ಹೆಸರು | 1700/- | 3400/- |
| 8. | ಉದ್ದು | 1700/- | 3400/- |
| 9. | ಕಬ್ಬು | 81.18 | 162.36/- |
| 10. | ಹತ್ತಿ | 1985/- | 3970/- |
| 11. | ಶೇಂಗಾ(ನೆಲಗಡಲೆ) | 1550/- | 3100/- |
| 12. | ಸೂರ್ಯಕಾಂತಿ | 1510/- | 3020/- |
| 13. | ಸೋಯಾ | 980/- | 1960/- |
| 14. | ಎಳ್ಳು | 1580/- | 3160/- |
| 15. | ಹುಚ್ಚೆಳ್ಳು | 1240/- | 2480/- |
| 16. | ಕಂಬು | 600/- | 1200/- |
| 17. | ಬಟಾಣಿ | 2300/- | 4600/- |
| 18. | ಹಲಸಂದೆ | 1200/- | 2400/- |
| 19. | ಅವರೆ | 1121/- | 2242/- |
| 20. | ಹಾಗಲಕಾಯಿ | 900/- | 1800/- |
| 21. | ಬದನೆಕಾಯಿ | 400/- | 800/- |
| 22. | ನುಗ್ಗೆಕಾಯಿ | 1600/- | 3200/- |
| 23. | ಗೆಡ್ಡೆಕೋಸು | 500/- | 1000/- |
| 24. | ಬೆಂಡೆಕಾಯಿ | 600/- | 1200/- |
| 25. | ಮೂಲಂಗಿ | 350/- | 700/- |
| 26. | ಹೀರೆಕಾಯಿ | 500/- | 1000/- |
| 27. | ಪಡವಲಕಾಯಿ | 500/- | 1000/- |
| 28. | ತೊಂಡೆಕಾಯಿ | 600/- | 1200/- |
| 29. | ಹೂಕೋಸು | 400/- | 800/- |
| 30. | ಬೀಟ್‌ರೂಟ್ | 819/- | 1638/- |
| 31. | ಈರುಳ್ಳಿ | 654/- | 1308/- |

| | | | |
|---|---|---|---|
| 32. | ಟಮೋಟೋ | 294/- | 588/- |
| 33. | ಆಲೂಗಡ್ಡೆ | 1067/- | 2134/- |
| 34. | ಕ್ಯಾರೆಟ್ | 1114/- | 2228/- |
| 35. | ಬೀನ್ಸ್ | 1195/- | 2390/- |
| 36. | ಅರಿಶಿನ | 2100/- | 4200/- |
| 37. | ಕರಿಬೂಜ(ಕಲ್ಲಂಗಡಿ) | 700/- | 1400/- |
| 38. | ಹಸಿಮೆಣಸಿನಕಾಯಿ | 977/- | 1954/- |
| 39. | ದಪ್ಪ ಮೆಣಸಿನಕಾಯಿ | 1000/- | 2000/- |
| 40. | ಶುಂಠಿ | 1935/- | 3870/- |
| 41. | ನವಣೆ | 1050/- | 2100/- |
| 42. | ಎಲೆಕೋಸು | 348/- | 696/- |
| 43. | ಕೊತ್ತಂಬರಿ | 1780/- | 3560/- |
| 44. | ಕಾಫಿ | 100/- ಒಂದು ಗಿಡಕ್ಕೆ | 200/- ಒಂದು ಗಿಡಕ್ಕೆ |
| 45. | ಏಲಕ್ಕಿ | 400/- ಕೆ.ಜಿ.ಗೆ. | 800/- ಕೆ.ಜಿ.ಗೆ. |
| 46. | ಮೆಣಸು | 90/- ಕೆ.ಜಿ.ಗೆ | 180/- ಕೆ.ಜಿ.ಗೆ. |
| 47. | ಕಿತ್ತಲೆ<br>i) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ<br>ii) 5 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ | 100/- ಒಂದು ಗಿಡಕ್ಕೆ<br>160/- ಒಂದು ಗಿಡಕ್ಕೆ | 200/- ಒಂದು ಗಿಡಕ್ಕೆ<br>320/- ಒಂದು ಗಿಡಕ್ಕೆ |
| 48. | ಅಡಿಕೆ/ತೆಂಗು<br>i) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ<br>ii) ವರ್ಷ 7ರಿಂದ 9 ವರ್ಷ ವಯಸ್ಸಿನ ಮರಗಳಿಗೆ<br>iii) 10 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ | 200/- ಒಂದು ಗಿಡಕ್ಕೆ<br>400/- ಒಂದು ಮರಕ್ಕೆ<br>1000/- ಒಂದು ಮರಕ್ಕೆ | 400/- ಒಂದು ಗಿಡಕ್ಕೆ<br>800/- ಒಂದು ಮರಕ್ಕೆ<br>2000/- ಒಂದು ಮರಕ್ಕೆ |
| 49. | ಬಾಳೆ | 80/- ಒಂದು ಗಿಡಕ್ಕೆ | 160/- ಒಂದು ಗಿಡಕ್ಕೆ |
| 50. | ಹೆರಳು | 2302/- ಒಂದು ಕ್ವಿಂಟಾಲ್‌ಗೆ | 4604/- ಒಂದು ಕ್ವಿಂಟಾಲ್‌ಗೆ |
| 51. | ಮೆಂತ್ಯ ಸೊಪ್ಪು | 2/- ಒಂದು ಕಟ್ಟಿಗೆ | 4/- ಒಂದು ಕಟ್ಟಿಗೆ |
| 52. | ನಿಂಬೆ | 5/- ಪ್ರತಿ ಗಿಡಕ್ಕೆ | 10/-ಪ್ರತಿ ಗಿಡಕ್ಕೆ |
| 53. | ಗಜ ನಿಂಬೆ | 12/- ಪ್ರತಿ ಗಿಡಕ್ಕೆ | 24/-ಪ್ರತಿ ಗಿಡಕ್ಕೆ |
| 54. | ಚೆಂಡು ಮಲ್ಲಿಗೆ (ದಪ್ಪದು) | 100/- ಕೆ.ಜಿ.ಗೆ | 200/- ಕೆ.ಜಿ.ಗೆ |
| 55. | ಕಾಕಡ ಹೂವು | 40/- ಕೆ.ಜಿ.ಗೆ | 80/- ಕೆ.ಜಿ.ಗೆ |

| | | | |
|---|---|---|---|
| 56. | ಕನಕಾಂಬರ | 80-120 ಕೆ.ಜಿ.ಗೆ | 160-240/- ಕೆ.ಜಿ.ಗೆ |
| 57. | ಸೇವಂತ್ರೆ | 10-12 ಪ್ರತಿ ಮಾರು | 20-24/-ಪ್ರತಿ ಮಾರು |

II. ಶಾಶ್ವತ ಅಂಗವಿಕಲತೆ/ಭಾಗಶ: ಶಾಶ್ವತ ಅಂಗವಿಕಲತೆ/ ಕಾಡು ಪ್ರಾಣಿಗಳಿಂದ ಗಾಯಗೊಂಡ ವ್ಯಕ್ತಿಗಳಿಗೆ ಪರಿಹಾರ/ ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟಕ್ಕೆ ಪರಿಹಾರ

| | | | |
|---|---|---|---|
| 58. | ಕಾಡು ಪ್ರಾಣಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆ | ರೂ.50,000 (ಐವತ್ತು ಸಾವಿರ ರೂಪಾಯಿ) | ರೂ.5.00 ಲಕ್ಷಗಳು (ಐದು ಲಕ್ಷಗಳು ರೂಪಾಯಿ) |
| 59 | ಕಾಡು ಪ್ರಾಣಿಯಿಂದ ಉಂಟಾಗುವ ಭಾಗಶ: ಶಾಶ್ವತ ಅಂಗವಿಕಲತೆ | ರೂ.20,000 (ಇಪ್ಪತ್ತು ಸಾವಿರ ರೂಪಾಯಿ) | ರೂ.2.50 ಲಕ್ಷಗಳು (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿ) |
| 60 | ಕಾಡು ಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಟ ಮೊತ್ತ | ರೂ.20,000 (ಇಪ್ಪತ್ತು ಸಾವಿರ ರೂಪಾಯಿ) | ರೂ.30,000 (ಮೂವತ್ತು ಸಾವಿರ ರೂಪಾಯಿ) |
| 61 | ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟ ಪ್ರತಿ ಪ್ರಕರಣಕ್ಕೆ | ರೂ.7,000 (ಏಳು ಸಾವಿರ ರೂಪಾಯಿ) | ರೂ.10,000 (ಹತ್ತು ಸಾವಿರ ರೂಪಾಯಿ) |

ಈ ದಯಾತ್ಮಕ ಧನ ಪಾವತಿಗೆ ಸಂಬಂಧಿಸಿದಂತೆ ಈಗಾಗಲೇ ಮೇಲೆ ಓದಲಾಗಿರುವ ಸರ್ಕಾರಿ ಆದೇಶಗಳಲ್ಲಿ ನಿರ್ದಿಷ್ಟಪಡಿಸಿರುವ ಷರತ್ತು ಮತ್ತು ನಿಬಂಧನೆಗಳು ಯಾವುದೇ ಬದಲಾವಣೆ ಇಲ್ಲದೆ ಮುಂದುವರೆಯುತ್ತವೆ.

(ಯು.ಹೆಚ್.ನಾರಾಯಣಸ್ವಾಮಿ) ೬೧.೧೬.
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.